ರತ್ನಾ ರಾಜ್‌ಕುಮಾರ್, ಹಾಸನ
*ಪೆನ್ಷನ್‌ಗೂ, ಟೆನ್ಷನ್‌ಗೂ ಇರುವ ವ್ಯತ್ಯಾಸವೇನು?*



ಪೆನ್ಷನ್‌ನಿಂದ ಕಡೆಯ ದಿನಗಳು ನೆಮ್ಮದಿ; ಟೆನ್ಷನ್‌ನಿಂದ ನೆಮ್ಮದಿಯ ದಿನಗಳು ಕಡೆ.

ಭಾರತಿ ಮಾನಗೆ, ಹೊನ್ನಾವರ
*ಅರಣ್ಯಗಳನ್ನು ಏಕೆ ಉಳಿಸಬೇಕು?*
ಉಳಿಸದಿದ್ದರೆ ಹಣ್ಣು ತಿನ್ನುವ ಬದಲು ಮಣ್ಣು ತಿನ್ನಬೇಕಾಗುವುದರಿಂದ.

ಕುಮಾರ ಚಲವಾದಿ, ಹಾಸನ
*ಹೆಣ್ಣಿಗಿರುವ ತಾಳ್ಮೆ ಗಂಡಿಗೇಕೆ ಇರುವುದಿಲ್ಲ?*
ಪಳಗಿಸುವವರಿಗೆ ಪ್ರಾಣಿಗಿಂತ ಹೆಚ್ಚು ತಾಳ್ಮೆ ಇರಬೇಕಾದುದು ಅತ್ಯಗತ್ಯ.

ಕಾಡನೂರು ರಾಮಶೇಷ, ಹುಲಿಮಂಗಲ
*ಸ್ವರ್ಗದ ಬಾಗಿಲನ್ನು ವೈಕುಂಠ ಏಕಾದಶಿಯಂದು ತೆರೆಯುವುದಕ್ಕೂ, ಹೊಸವರ್ಷದ 'ಮಧ್ಯರಾತ್ರಿ' ತೆರೆಯುವುದಕ್ಕೂ ಏನು ವ್ಯತ್ಯಾಸ?*
ಅದು ಸ್ವರ್ಗಕ್ಕೆ ದಾರಿ; ಇದು ನರಕಕ್ಕೆ ದಾರಿ.

ನರಸಿಂಹ ಪೈ, ಹೊನ್ನಾವರ
*ಪ್ರೀತಿ ಮಾಡುವವರು ಜಾತಿಗೆ ಹೆದರುವುದೇಕೆ?*



ಜಾತಿಗಳು ಸಂಸ್ಕಾರದ ಹೆಸರಲ್ಲಿ ಪ್ರೀತಿಗೆ ಅಂತ್ಯಸಂಸ್ಕಾರ ಮಾಡುವುದರಿಂದ.

ಎಚ್.ಆರ್. ದೇಸಾಯಿ, ರಾಯಚೂರು
*ಹೊಟ್ಟೆಗೆ ಹಿಟ್ಟು ಬಿದ್ದ ಕೂಡಲೆ ಕಣ್ಣೇಕೆ ಮಬ್ಬು?*
ನುಂಗುವ, ನುಂಗಲು ಯೋಚಿಸುವ ಕಾಯಕಕ್ಕೊಂದು ಬ್ರೇಕ್ ಇರಲೆಂದು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಸತ್ತವರಿಗೆ ಗತಿಸಿದರು ಅಂತಾರಲ್ಲಾ...?*
'ಸ್ವಾಗತಿಸಿದರು' ಪದದಲ್ಲಿನ ಸ್ವ (ಸ್ವಂತಿಕೆ – ಆತ್ಮ) ಹೋದ ಮೇಲೆ ಉಳಿಯುವುದು ಅದೇ ಅಲ್ಲವೆ!

ವಿ. ಹಮೀದ್, ವಿಟ್ಲ
*ಪತ್ನಿಯು ,ಸಿನೆಮಾದಲ್ಲಿ ನಟಿಸಿ, ಆದರೆ ನಾಟಕದಲ್ಲಿ ನಟಿಸದಿರಿ ಎನ್ನಲು ಕಾರಣವೇನು?*
ನಾಟಕದಲ್ಲಿ ತಕ್ಷಣ ಪ್ರತಿಕ್ರಿಯೆ ದೊರೆತು ನಿಮ್ಮ ಮುಖ ರೀ-ಅರೇಂಜ್ ಆದೀತೆಂಬ ಭಯ.

ರವಿ ಎಂ. ಪೈ, ಹೊನ್ನಾವರ
*ಜನರಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಾಗಲು ಕಾರಣವೇನು?*
ವೈರಸ್‌ಗಳಲ್ಲಿ ಔಷಧಿನಿರೋಧಕ ಶಕ್ತಿ ಹೆಚ್ಚಿರುವುದು!

ವಿ.ಎಸ್. ಹಿಂದೂಪುರ, ಬಳ್ಳಾರಿ
*ನೇತ್ರದಾನ, ದೇಹದಾನ ಮಾಡಿರೆಂದು ಹೇಳುವ ಸ್ವಾಮಿಗಳು ಅವರೇ ಏಕೆ ಮಾಡುವುದಿಲ್ಲ?*
ಮಾಡಿದ್ದರಂತೆ. ಅವರಿಂದ ಕಣ್ಣು ಪಡೆದವನ ದೃಷ್ಟಿ ಎಷ್ಟೇ ತಪ್ಪಿಸಲೆತ್ನಿಸಿದರೂ ಹೆಣ್ಣಿನತ್ತಲೇ ಚಲಿಸುತ್ತಿತ್ತಂತೆ!

ಎಂ.ಎ. ಕುಮಾರ್, ಬೆಂಗಳೂರು
*ಒಳ್ಳೆಯ ಸಾವಿಗೂ, ಕೆಟ್ಟ ಸಾವಿಗೂ ವ್ಯತ್ಯಾಸವೇನು?*
ಶವ ಕಂಡವರು 'ಅಯ್ಯೋ' ಎಂದರೆ ಒಳ್ಳೆಯ ಸಾವು; 'ಸದ್ಯ!' ಎಂದರೆ ಕೆಟ್ಟ ಸಾವು.

ಎನ್. ಗೋಪಾಲರಾವ್, ಬೆಂಗಳೂರು
*2+2=4 ಎಂದರೆ ಇಲ್ಲೊಬ್ಬಾಕೆ 'ಅಲ್ಲ. ಅದು 5-1' ಅಂತಾಳೆ. ಏನಿದರ ಅರ್ಥ?*
ನೀವು ಹೇಳಿದ್ದು ಸತಿಪತಿ ಮಕ್ಕಳೆರಡರ ಸಂಸಾರ. ಆಕೆ ಹೇಳಿದ್ದು 'ಸರಿಯೇ. ಅತ್ತೆಯನ್ನು ಹೊರಗಟ್ಟಿ' ಎಂದು.

ಮೋಹನರಾಜು ಎಸ್.ಎ., ಶಿವಮೊಗ್ಗ
*ಕೋಪ ಮನುಷ್ಯನ ಮೊದಲ ಶತ್ರು. ಎರಡನೆಯ ಶತ್ರು ಯಾರು?*
ಅಷ್ಟೇ ಕೋಪವಿರುವ ಇನ್ನೊಬ್ಬ ಕೋಪಿಷ್ಠ.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
*ಮನುಷ್ಯನಿಗೆ ಕೀರ್ತಿ ಬರುವುದು ಯಾವುದರಿಂದ ಸಾರ್?*
ಪ್ರಚಾರದಿಂದ.

## ಬಹುಮಾನಿತ ಪ್ರಶ್ನೆ

ಕೆ.ಯಂ. ವೀರೇಶ್, ಕೂಡ್ಲಿಗಿ
*ಜಗತ್ತಿನಲ್ಲಿ ಅತ್ಯಂತ ಕಟುಕ ಯಾರು?*
ಸಾಯುತ್ತಿರುವವರ ಪಕ್ಕ ನಿಂತು ಸೆಲ್ಫಿ ತೆಗೆದುಕೊಳ್ಳುವವನು.

ಡಿ.ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಗಂಡು ಮೆಟ್ಟಿದ ನೆಲ ಎನ್ನುವರಲ್ಲ, ಹೆಣ್ಣು ಮೆಟ್ಟಿದ ನೆಲ ಇಲ್ಲವೆ?*
ಹ್ಞ! ಹೆಣ್ಣು ಮೆಟ್ಟುವುದು ನೆಲವನ್ನಲ್ಲ, ಗಂಡನ್ನು ಎನ್ನಲು ಕಾಳಿಯೇ ಸಾಕ್ಷಿ.

ಆರ್. ಮಧುಸೂದನ್, ಹಾಸನ
*ಪ್ರತಿನಿತ್ಯ ನಾಲಿಗೆ ತಿಕ್ಕಿದರೂ ಮನುಷ್ಯ ಸುಳ್ಳು ಹೇಳಲು ಕಾರಣ ಏನು?*
ಮೆದುಳು ಸುಳ್ಳಿನ ಅಣೆಕಟ್ಟು; ನಾಲಿಗೆ ಕಾಲುವೆ. ಅಣೆಕಟ್ಟು ಕ್ಲೀನಾಗದಿದ್ದರೆ ಕಾಲುವೆಯಲ್ಲಿ ಕೊಳೆ ನೀರೇ.

ವಿಜಯಕುಮಾರ್ ಹೆಚ್.ಕೆ. ರಾಯಚೂರು
*ಮಂಗ ಇಂಗು ತಿನ್ನುತ್ತದೆಯೆ?*



ತಾನೇ ತಿನ್ನುವುದಿಲ್ಲವಾದರೂ ಬಲವಂತವಾಗಿ ತಿನ್ನಿಸುವ ಗೊರಿಲ್ಲಾಗಳು ಸದನದಲ್ಲಿವೆ.

ಸುಜ್ಞಾನಾಚಾರ್ಯ ಕೆ.ಪಿ. ಕಲಿಕೆರೆ
*ಬ್ರಹ್ಮಾಂಡದ ಅಂತ್ಯ ಹೇಗಾಗುತ್ತದೆ?*
ಕ್ಷಮಿಸಿ. ಪ್ರತಿ ಕ್ಷಣ ಬದಲಾಗುವ ಯಾವುದಕ್ಕೂ ಅಂತ್ಯ ಇರುವುದಿಲ್ಲ.

ಹಾಡ್ಯ ಬಿ. ಜಯಾನಂದ, ಮೈಸೂರು
*ಶೂ ಹಾಕಿಕೊಂಡು ಮಾಲಾರ್ಪಣೆ, ಪುಷ್ಪಾರ್ಚನೆ, ದೀಪ ಬೆಳಗುವುದು ಏನನ್ನು ಸೂಚಿಸುತ್ತದೆ?*
ಪ್ರಾಯಶಃ ಶೂ ಒಳಗಿನ ಸಾಕ್ಸ್ ಹರಿದಿರಬಹುದು ಎಂಬುದನ್ನು.

■ ರಾಮ್